**ಪಾಠ–4** **ಏಪ್ರಿಲ್ 20–26**

# ಒಂಟಿಯಾಗಿರುವಾಗ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಪ್ರಸಂಗಿ 4:9–12; ಫಿಲಿಪ್ಪಿಯವರಿಗೆ 4:11–13, 1 ಕೊರಿಂಥದವರಿಗೆ 7:25–34, ಮತ್ತಾಯ 19:8, ಆದಿಕಾಂಡ 37:34, ಯೆಶಾಯ 54.5.

**ಸ್ಮರಣವಾಕ್ಯ : "ಮತ್ತು ಯೆಹೋವದೇವರು–ಮನುಷ್ಯನು ಒಂಟಿಗನಾಗಿರುವುದು ಒಳ್ಳೇದಲ್ಲ. ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು ಅಂದನು" (ಆದಿಕಾಂಡ 2:18).**

ವರ್ಷಗಳ ಹಿಂದೆ ಸುದ್ದಿ ಮಾಡಿದ ನೋವಿನ ಕಥೆ ಆದರೂ ಆಕರ್ಷಕವಾದುದು. ಯುವತಿಯೊಬ್ಬಳು ಆಕೆಯ ಕೊಠಡಿಯಲ್ಲಿ ಸಾವನ್ನಪ್ಪಿರುವುದನ್ನು ಕಂಡರು ಸಾವು ದುರಂತವಾಗಿದ್ದರು ಕಥೆಯನ್ನು ಅತಿ ಕೆಟ್ಟದಾಗಿ ಮಾಡಿದ್ದು ಆ ಮಹಿಳೆ ಸತ್ತ 10 ವರ್ಷಗಳಾದನಂತರ ಸಿಕ್ಕಿದ್ದು. ಹತ್ತು ವರ್ಷಗಳು! ಹೀಗಾಗಿ, ಜನರು ಕೇಳಿದ ಪ್ರಶ್ನೆ ಸರಿಯಾಗಿ ಹೀಗಿತ್ತು. ಇಂತಹ ದೊಡ್ಡ ನಗರದಲ್ಲಿ ಅನೇಕ ಜನರೊಂದಿಗೆ ಅನೇಕ ಸಂಪರ್ಕ ಮಾಧ್ಯಮಗಳೊಂದಿಗೆ ಬೀದಿ ವ್ಯಕ್ತಿಯಲ್ಲದ ಈ ಮಹಿಳೆ ಸತ್ತು ಇಷ್ಟು ಕಾಲವಾದರೂ ಯಾರಿಗೂ ತಿಳಿದಿಲ್ಲವೋ? ತೀವ್ರವಾದರೂ ಈ ಕಥೆಯು ಒಂದು ವಾಸ್ತವದ ಉದಾಹರಣೆಯಾಗಿದೆ :

ಅತಿರೇಕವಾದರೂ ಈ ಕಥೆಯು ಒಂದು ವಾಸ್ತವದ ಉದಾಹರಣೆಯಾಗಿದೆ. ಅನೇಕ ಜನರು ಒಂಟಿತನದಿಂದ ಬಳಲುತ್ತಿದ್ದಾರೆ. 2016ರಲ್ಲಿ "ದಿ ನ್ಯೂಯಾರ್ಕ್ ಟೈಮ್ಸ್ ರಿಸರ್ಚ್ಸ್ ಕನ್ಫ್ರಂಟ್ ಆ್ಯನ್ ಎಪಿಡೇಮಿಕ್ ಆಪ್ ಲೋನ್ಲಿನೆಸ್" ಎಂಬ ಲೇಖನವನ್ನು ಪ್ರಕಟಿಸಿದರು. ಸಮಸ್ಯೆ ನಿಜ.

ಪ್ರಾರಂಭದಿಂದಲೂ ಮಾನವರಾದ ನಾವು ಒಂಟಿಯಾಗಿರುವುದಕ್ಕೆ ಬಯಸುವುದಿಲ್ಲ. ಏದೆನ್‌ನಿಂದ ಇನ್ನೂ ಮುಂದಕ್ಕೆ, ಸ್ವಲ್ಪ ಮಟ್ಟಿಗೆ ಅಥವಾ ಬೇರೊಂದಕ್ಕೆ ನಾವು ಇತರ ಮನುಷ್ಯರೊಂದಿಗೆ ಒಡನಾಟದಲ್ಲಿ ಬದುಕುತ್ತಿದ್ದೇವೆ. ಖಂಡಿತವಾಗಿ ಪಾಪ ಬಂದಿತು ಮತ್ತು ಅಲ್ಲಿಂದೀಚೆಗೆ ಏನೂ ಸರಿಯಿಲ್ಲ. ಈ ವಾರ ನಾವು ಜೀವನದ ವಿವಿಧ ಸಮಯಗಳಲ್ಲಿ ಸಹಜವಾದ ಮತ್ತು ಒಂಟಿತನದ ಪ್ರಶ್ನೆಯನ್ನು ನೋಡುತ್ತೇವೆ. ಬಹುಶಃ ನಾವೆಲ್ಲರೂ ಸ್ವಲ್ಪ ಸಮಯ ಎದುರಿಸಿದ್ದೇವೆ. ಹಾಗಾದರೆ ನಿಮ್ಮನ್ನು ಅದೃಷ್ಟವಂತರು ಎಂದು ಪರಿಗಣಿಸಿರಿ.

*** ಏಪ್ರಿಲ್ 27ರ ಸಬ್ಬತ್ತಿನ ಸಿದ್ಧತೆಗೆ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.**

**ಭಾನುವಾರ** **ಏಪ್ರಿಲ್ 21**

## ಒಡನಾಟ/ ಸಹವಾಸ

**ಪ್ರಸಂಗಿ 4:9–12 ಓದಿರಿ. ಅಲ್ಲಿರುವ ಮೂಲಕಲ್ಪನೆ ಏನು? ಯಾವ ಜೀವನದ ತತ್ವ ಇದು ಸಾಮಾನ್ಯವಾಗಿ ಮಾತನಾಡುತ್ತದೆ?**

ನಮ್ಮಲ್ಲಿ ಕೆಲವರು ಮಾತ್ರ ಅದನ್ನು ಮಾಡಬಹುದು. ನಾವು ಒಂಟಿಗರಾಗಿದ್ದಾಗ್ಯೂ ಮತ್ತು ಒಂಟಿಯಾಗಿರುವುದಕ್ಕೆ ಇಷ್ಟಪಟ್ಟರೆ ಶೀಘ್ರದಲ್ಲೇ ಅಥವಾ ನಂತರ ನಾವು ಬರಿ ಸ್ವಲ್ಪ ಒಡನಾಟವನ್ನೇ ಬಯಸುವುದಿಲ್ಲ. ಆದರೆ ಅದು ಅವಶ್ಯಕತೆಯಿದೆ. ವಿಶೇಷವಾಗಿ ಅಗತ್ಯವಿರುವ ಸಮಯದಲ್ಲಿ ನಾವು ಸಹವಾಸಕ್ಕೋಸ್ಕರ ಸಮುದಾಯಕ್ಕೆ ಮಾಡಲ್ಪಟ್ಟಿದ್ದೇವೆ. ವಿಶೇಷವಾಗಿ ಅಗತ್ಯ ಸಮಯದಲ್ಲಿ ಸಮಾಧಾನ ಪಡಿಸುವ ಮತ್ತು ಬೆಂಬಲ ನೀಡುವ ನಿಕಟ ಕುಟುಂಬ ಸದಸ್ಯರನ್ನು ಹೊಂದಿರುವವರು ಎಷ್ಟೋ ಭಾಗ್ಯವಂತರಲ್ಲವೆ.

ದುರದೃಷ್ಟವಶಾತ್ ನಾವು ಜೀವಿಸುವ ಸಮುದಾಯದಲ್ಲಿ ನಾವು ಕೆಲಸ ಮಾಡುವ ಸ್ಥಳದಲ್ಲಿ ನಮ್ಮ ಸಭೆಯಲ್ಲಿ ಕೆಲವು ಜನರಿದ್ದಾರೆ. ಅವರಿಗೆ ಅಗತ್ಯದ ಸಮಯದಲ್ಲಿ ಮಾತ್ರವಲ್ಲದೇ ದಿನದ ಅಂತ್ಯದಲ್ಲಿಯೂ ಸಹ ಸಂಭಾಷಣೆ ನಡೆಸುವುದಕ್ಕೆ ತಿರುಗಿಕೊಳ್ಳಲು ಯಾರು ಇರುವುದಿಲ್ಲ. ಏಕಾಂಗಿತನದ ಭಾವನೆ ಯಾವುದೇ ಸಮಯದಲ್ಲಾದರೂ ಬರಬಹುದು. "ಭಾನುವಾರ ನನಗೆ ಕಠಿಣ

ದಿನ" ಎಂದು ಅವಿವಾಹಿತ ಹೇಳಿದ. ವಾರದಂದು ನಾನು ಕೆಲಸ ಮಾಡುತ್ತಿದ್ದ ಜನರಿಂದ ಸುತ್ತುವರಿದಿದ್ದೇನೆ. ಸಬ್ಬತ್ ದಿನ ನಾನು ಸಭೆಯಲ್ಲಿ ಜನರನ್ನು ನೋಡುತ್ತೇನೆ. ಆದರೆ ಭಾನುವಾರದಂದು ನಾನು ಒಂಟಿಗನಾಗಿದ್ದೇನೆ".

ಈ ಕೆಳಗಿನ ವಾಕ್ಯ ವೃಂದಗಳಿಂದ ನಾವು ಯಾವ ತತ್ವಗಳನ್ನು ಕಲಿಯಬಲ್ಲೆವು. ಅದರಲ್ಲೂ ವಿಶೇಷವಾಗಿ ನಾವು ಏಕಾಂಗಿತನದ ಸಮಯದಲ್ಲಿ ಹಾದು ಹೋಗುವಾಗ? ಯೋಹಾನ 16:32,33; ಫಿಲಿಪ್ಪಿಯವರಿಗೆ 4:11–13.

ಹೌದು ಕ್ರೈಸ್ತರಾಗಿ ನಾವು ದೇವರ ಅಸ್ತಿತ್ವ ಮಾತ್ರವಲ್ಲ. ಆದರೆ ವಾಸ್ತವವಾಗಿ ದೇವರೊಂದಿಗೆ ಒಡನಾಟ ಮಾಡುವ ಸಾಮರ್ಥ್ಯ ಹೊಂದಿರುತ್ತೇವೆ ಮತ್ತು ನಮಗೆ ದೇವರ ನಿಕಟತೆಯಿಂದ ಸಮಾಧಾನ ಪಡೆಯಬಹುದು. ಆದರೆ ಏದೆನ್‌ನಲ್ಲಿ ಆದಾಮನಿಗೆ ದೇವರ ನಿಕಟತೆಯು ಕರ್ತನು ಹೇಳುವುದನ್ನು ನಿಲ್ಲಿಸಲಾಗಲಿಲ್ಲ". "ಮನುಷ್ಯನು ಒಂಟಿಗನಾಗಿರುವುದು ಒಳ್ಳೇಯದಲ್ಲ" (ಆದಿಕಾಂಡ 2:18). ಹೀಗಾಗಿ ದೇವರು ಆದಾಮನನ್ನು ತಿಳಿದಿದ್ದನು. ಪಾಪದಿಂದ ಹಾನಿಗೊಳಗಾಗದ ಜಗತ್ತಿನಲ್ಲಿ ದೇವರೊಂದಿಗೆ ಒಡನಾಟ ಹೊಂದಿದ್ದಾಗ್ಯೂ ಇನ್ನೂ ಮನುಷ್ಯರ ಒಡನಾಟ ಅಗತ್ಯವಿತ್ತು. ಹಾಗೆಯೇ ಉಳಿದ ನಮಗೆ ಎಷ್ಟು ಹೆಚ್ಚು ಒಡನಾಟದ ಅಗತ್ಯವಿದೆ.

ನಾವು ಕೂಡ ಜಾಗರೂಕರಾಗಿರುವ ಅಗತ್ಯವಿದೆ. ಯಾಕೆಂದರೆ ಸುತ್ತ ಬಹಳಷ್ಟು ಜನರು ಇದ್ದಾರೆ. ಒಬ್ಬ ವ್ಯಕ್ತಿ ಒಂಟಿಯಾಗಿರಲಾರನು. ಕೆಲವು ಬಹು ದೊಡ್ಡ ಏಕಾಂಗಿ ಜನರು ನಗರಗಳಲ್ಲಿ ವಾಸಿಸುತ್ತಾರೆ. ಅಲ್ಲಿ ಅವರಿಗೆ ಆಗಾಗ್ಗೆ ಇತರರೊಂದಿಗೆ ಪರಸ್ಪರ ವರ್ತಿಸುವುದು ಇರುತ್ತದೆ. ಇತರ ದೇಹಗಳ ಸುತ್ತ ಇರುವುದರಿಂದ ಯಾರೋ ಒಬ್ಬರು ಒಂಟಿ ಅಥವಾ ದೂರವಾದ ಅನುಭವ ಹೊಂದಿದ್ದೇವೆಂದು ಮತ್ತು ಒಡನಾಟದ ಅವಶ್ಯಕತೆಯಿಲ್ಲವೆಂದು ಅರ್ಥವಲ್ಲ.

**ಏಕಾಂಗಿ, ದೂರವಾದ, ತಿರಸ್ಕರಿಸಲ್ಪಟ್ಟ ಅನುಭವ ಹೊಂದಿದವರನ್ನು ಯಾವಾಗಲೂ ತಿಳಿಯಲು ಸುಲಭವಲ್ಲ ಅಥವಾ ಕೇವಲ ಸಾಧಾರಣವಾಗಿ ನೋಯಿಸುವುದಕ್ಕೆ ಇನ್ನೊಬ್ಬನ ಅವಶ್ಯಕತೆಯಿದೆ. ಮತ್ತೇ ನಿಲ್ಲದಿದ್ದರೆ ಕೇವಲ ಮಾತನಾಡಲು ಆ ವ್ಯಕ್ತಿಗಳು ಯಾರಲ್ಲಿ ಹೆಚ್ಚು ಸಂವೇದನಾಶೀಲರಾಗಬೇಕೆಂದು ನೀವು ಪೂರ್ವಭಾವಿಯಾಗಿ ಹೇಗೆ ಹುಡುಕಬಹುದು?**

**ಸೋಮವಾರ** **ಏಪ್ರಿಲ್ 22**

## ಅವಿವಾಹಿತ ಜೀವನ

ಯುವತಿಯೊಬ್ಬಳು ಮದುವೆಯಾಗದೆ ಇರುವ ಅನುಕೂಲಗಳ ಬಗ್ಗೆ ಹೇಳಿದರು: "ಎರಡು ಬಾರಿ ನಾನು ಮಿಷನ್ ಕ್ಷೇತ್ರದಲ್ಲಿ ಸೇವೆಗೆ ಹೋಗುವ ಅವಕಾಶ ಹೊಂದಿದ್ದೆ ಮತ್ತು ನಾನು ಯಾವುದೇ ಹಿಂಜರಿಕೆಯಿಲ್ಲದೆ ಪ್ರತಿಕ್ರಿಯಿಸಿದೆ". ಒಬ್ಬ ವಿವಾಹಿತ ವ್ಯಕ್ತಿ, ಕುಟುಂಬದೊಂದಿಗೆ ಆ ತೀರ್ಮಾನವನ್ನು ಮಾಡಲು ಸ್ವಲ್ಪ ಸಮಯ ತೆಗೆದುಕೊಳ್ಳಬೇಕಾಗುವುದು. ಏಕೆಂದರೆ ಅದು ಕೇವಲ ಅವರನ್ನು ಒಳಗೊಂಡಿಲ್ಲ. ಆದರೆ ಅವರ ಸಂಗಾತಿ ಮತ್ತು ಮಕ್ಕಳು ಸಹ.

ಪೌಲನ ಪ್ರಕಾರ ಅವಿವಾಹಿತರಾಗಿ ಉಳಿದುಕೊಳ್ಳುವ ಒಳ್ಳೆಯ ಕಾರಣಗಳು ಏನು? (1 ಕೊರಿಂಥದವರಿಗೆ 7:25–34).

ಬಹಳಷ್ಟು ಜನರು ಮದುವೆಯಾಗುವುದು ದೇವರ ಚಿತ್ತವೆಂದು ಭಾವಿಸುತ್ತಾರೆ. "ಮನುಷ್ಯನು ಒಂಟಿಯಾಗಿರುವುದು ಒಳ್ಳೆಯದಲ್ಲ" ಎಂದು ಅವರು ಹೇಳಲಿಲ್ಲವೇ ಮತ್ತು ಇನ್ನೂ ಸತ್ಯವೇದದಲ್ಲಿ ವಿವಾಹವಾಗದೆ ಇರುವ ಅನೇಕ ಜನರ ಉದಾಹರಣೆಗಳು ಇವೆ. ಎಲ್ಲರಿಗೂ ಮಹಾನ್ ಉದಾಹರಣೆಯಾದ ಯೇಸುಕ್ರಿಸ್ತನು ಸಹ ಸೇರಿದ್ದಾರೆ.

ಯೆಹೆಜ್ಕೇಲನ ಹೆಂಡತಿಯು ಇದ್ದಕ್ಕಿದ್ದಂತೆ ನಿಧನರಾದರು. ತನ್ನ ಜನರ ಪರಿಸ್ಥಿತಿ ಬಗ್ಗೆ ಕಠಿಣವಾದ ಪಾಠವನ್ನು ತಿಳಿಸಲು ದೇವರು ಅವನ ಜೀವನದಲ್ಲಿ ಈ ಪ್ರಮುಖ ವ್ಯಕ್ತಿಯನ್ನು ತೆಗೆದುಕೊಂಡನು. ಅವನು ದುಃಖಿಸಲು ಸಹ ಅನುಮತಿಸಲಿಲ್ಲ. ಆದರೆ ಕರ್ತನು ಆತನಿಗೆ ಒಪ್ಪಿಸಿಕೊಟ್ಟ ಸೇವೆಯೊಂದಿಗೆ ಮುಂದುವರೆಯಬೇಕಿತ್ತು (ಯೆಹೆಜ್ಕೇಲನು 24:15–18). ಪ್ರವಾದಿಯಾದ ಹೋಶೆಯನು ಮುರಿದ ವಿವಾಹದ ಅನುಭವವನ್ನು ಅನುಭವಿಸಿದನು. ಆದರೂ ಅವನು ಸೇವೆಯಲ್ಲಿ ಮುಂದುವರೆಯಲು ಸಾಧ್ಯವಾಯಿತು. ಕಥೆಯು ನಮಗೆ ವಿಚಿತ್ರವಾಗಿ ತೋರುತ್ತದೆಯಾದರೂ ದೇವರು ಅವನಿಗೆ ಹೋಗಿ ಒಬ್ಬ ವೇಶ್ಯೆಯನ್ನು ಮದುವೆಯಾಗು ಎಂದು ಹೇಳಿದನು. ಯಾಕೆಂದರೆ ಇತರ ಪುರುಷರಿಗೋಸ್ಕರ ಹೋಶೆಯನನ್ನು ತೊರೆಯುತ್ತಾಳೆಂದು ದೇವರಿಗೆ ತಿಳಿದಿತ್ತು (ಹೋಶೇಯನು

1–3). ಹಿಂತಿರುಗಿ ನೋಡಿದಾಗ ದೇವರು ಇಸ್ರಾಯೇಲ್ಯರಿಗೂ ಮತ್ತು ನಮಗೂ ಏಕಪಕ್ಷೀಯ ಪ್ರೀತಿಯನ್ನು ವಿವರಿಸಲು ಪ್ರಯತ್ನಿಸುತ್ತಿರುವುದನ್ನು ನಾವು ಕಾಣಬಹುದು. ಆದರೆ ಹೋಶೇಯನೇ ವಸ್ತುಪಾಠವಾದರಿಂದ ಅದು ಬಹಳ ಕಷ್ಟ ಮತ್ತು ನೋವನ್ನು ಉಂಟುಮಾಡಿತು.

ಈ ಪ್ರತಿಯೊಂದು ಉದಾಹರಣೆಗಳಲ್ಲಿ ವೈವಾಹಿಕ ಸ್ಥಾನಮಾನ ಸಮಸ್ಯೆಯಲ್ಲ. ದೇವರು ವ್ಯಕ್ತಿಯ ಪ್ರಾಮಾಣಿಕತೆ, ವಿಧೇಯತೆ ಮತ್ತು ದೇವರು ಹೇಳಬೇಕೆಂದಿರುವುದನ್ನು ಹೇಳುವ ಸಾಮರ್ಥ್ಯದ ಬಗ್ಗೆ ಆಸಕ್ತಿ ಹೊಂದಿದ್ದನು. ನಮ್ಮ ಜೀವನವನ್ನು ನಮ್ಮ ವೈವಾಹಿಕ ಪರಿಸ್ಥಿತಿಯಿಂದ ಸ್ಪಷ್ಟಪಡಿಸಲು ಆಗುವುದಿಲ್ಲ ಎಂದು ಖಚಿತವಾಗಿರಬೇಕು. ನಾವು ವಿವಾಹವಾಗದೆ ನಾವು ಪೂರ್ಣರಾಗುವುದಿಲ್ಲ ಎಂದು ಅನೇಕ ಧ್ವನಿಗಳು ಇಂದು ನಮಗೆ ಹೇಳುತ್ತವೆ. ಪೌಲನು ಪ್ರತಿಕ್ರಿಯಿಸುತ್ತಾನೆ. "ಇಹಲೋಕದ ಜನರಂತೆ ಇರಬೇಡಿ". ಬದಲಾಗಿ ನಿಮ್ಮ ದೇಹಗಳನ್ನು ಆತನಿಗೆ ಸಜೀವಯಜ್ಞವಾಗಿ ಪರಿಶುದ್ಧವಾಗಿ ಮತ್ತು ಮೆಚ್ಚುಗೆಯಾಗಿ ಅರ್ಪಿಸಿರಿ" (ರೋಮಾಪುರದವರಿಗೆ 12:1,2).

**ಅವಿವಾಹಿತರಾದ ಸಭಾಸದಸ್ಯರು ಮತ್ತು ಸಭಾಸದಸ್ಯರಲ್ಲದವರಿಗೆ ನೀವು ಯಾವ ಪ್ರಾಯೋಗಿಕ ವಿಧಾನಗಳನ್ನು ಅವರಿಗೆ ಬೋಧಿಸಬಹುದು?**

**ಮಂಗಳವಾರ** **ಏಪ್ರಿಲ್ 23**

## ಮದುವೆ ಅಂತ್ಯಗೊಂಡಾಗ

ದೈಹಿಕನೋವು ಮತ್ತು ಮರಣದ ಹೊರತಾಗಿ ಪಾಪವು ಮಾನವೀಯತೆಯನ್ನು ಧ್ವಂಸ ಮಾಡಿತು. ಕುಟುಂಬಕ್ಕಿಂತ ಪಾಪದಿಂದ ಹೆಚ್ಚು ವಿನಾಶಕಾರಿ ಪರಿಣಾಮಗಳನ್ನು ಎದುರಿಸಿದೆ? "ಕೌಟುಂಬಿಕ ನಿಷ್ಕ್ರಿಯತೆ" ಎಂಬ ಪದವು ಆದಷ್ಟು ಮಿತಿಮೀರಿದೆ. ಯಾವ ಕುಟುಂಬವು ಸ್ವಲ್ಪ ಮಟ್ಟಿಗೆ ನಿಷ್ಕ್ರಿಯವಲ್ಲ?

ಮರಣದ ಹೊರಗೆ ಕುಟುಂಬವು ಎದುರಿಸಬಹುದಾದ ಕಠಿಣ ವಿಷಯವೆಂದರೆ ವಿಚ್ಛೇದನೆ. ಈ ಭಯಾನಕ ಅನುಭವದ ಮೂಲಕ ಹಾದುಹೋಗುವ ಜನರ ಪೂರ್ಣಶ್ರೇಣಿ ಭಾವನಗಳನ್ನು ನಡೆಸುತ್ತಾರೆ. ವ್ಯಕ್ತಿಗಳ ಮೇಲೆ

ಅವಲಂಬಿತವಾಗಿರುವ ಮೊದಲ ಮತ್ತು ಅತ್ಯಂತ ಸಾಮಾನ್ಯ ದುಃಖವು ಹಲವಾರು ತಿಂಗಳುಗಳಿಂದ ಹಲವಾರು ವರ್ಷಗಳವರೆಗೆ ವಿಭಿನ್ನ ತೀವ್ರತೆಯೊಂದಿಗೆ ಇರುತ್ತದೆ. ಕೆಲವರು ಭಯವನ್ನು ಅನುಭವಿಸಬಹುದು– ತಿಳಿಯದ ಭಯ, ಆರ್ಥಿಕ ಆತಂಕಗಳು ಮತ್ತು ನಿಭಾಯಿಸಲು ಸಾಧ್ಯವಾಗದ ಭಯ. ಕೆಲವರು ಖಿನ್ನತೆ, ಕೋಪ ಮತ್ತು ಒಂಟಿತನ ಅವಧಿಯ ಮೂಲಕ ಹಾದುಹೋಗಬಹುದು– ಹೌದು.

**ವಿಚ್ಛೇದನಕ್ಕೆ ಸಂಬಂಧಿಸಿದ ಯಾವ ತತ್ವಗಳನ್ನು ನಾವು ಕೆಳಗಿನ ವಾಕ್ಯಗಳಿಂದ ಸಂಗ್ರಹಿಸಬಹುದು**? ಮಲಾಕಿ 2:16; ಮತ್ತಾಯ 5:31, 32; 19:8; 1 ಕೊರಿಂಥ 7:11–13.

"ಕ್ರಿಸ್ತನ ವಿಮೋಚನಾ ಸಂಸ್ಥೆಯಾಗಿರುವ ಸಭೆ ತನ್ನ ಎಲ್ಲ ಸದಸ್ಯರಿಗೆ ಅವರ ಎಲ್ಲ ಅವಶ್ಯಕತೆಗಳಲ್ಲಿ ಸೇವೆ ಸಲ್ಲಿಸಬಹುದು ಮತ್ತು ಪ್ರತಿಯೊಬ್ಬರನ್ನು ಪಕ್ವವಾದ ಕ್ರೈಸ್ತೀಯ ಅನುಭವಕ್ಕೆ ಬೆಳೆಸಿಕೊಳ್ಳಲು ಪೋಷಿಸುವುದು. ಸದಸ್ಯರು ಜೀವಿತಾವಧಿಯ ನಿರ್ಧಾರಗಳಾದ ಮದುವೆ ಮತ್ತು ಬಳಲಿದ ಅನುಭವಗಳಾದ ವಿಚ್ಛೇದನವನ್ನು ಎದುರಿಸುವಾಗ ಇದು ಪ್ರತ್ಯೇಕವಾಗಿಯೂ ಸತ್ಯ. ದಂಪತಿಗಳ ಮದುವೆಯು ಒಡೆಯುವ ಅಪಾಯದಲ್ಲಿದ್ದರೆ, ಗಂಡ ಹೆಂಡತಿ ಮತ್ತು ಸಭೆ ಅಥವಾ ಕುಟುಂಬದಲ್ಲಿರುವವರು ಅವರ ಗಾಯಗೊಂಡ ಸಂಬಂಧಗಳನ್ನು ಪುನರ್ ಸ್ಥಾಪಿಸಲು ದೈವೀಕ ತತ್ವಗಳೊಂದಿಗಿನ ಹೊಂದಾಣಿಕೆಯಲ್ಲಿ ಸಂಧಾನ ಮಾಡುವ ಪ್ರತಿಯೊಂದು ಪ್ರಯತ್ನವನ್ನು ಮಾಡಬೇಕು (ಹೋಶೇಯ 3:1–3; 1 ಕೊರಿಂಥದವರಿಗೆ 7:10, 11; 13:4–7; ಗಲಾತ್ಯದವರಿಗೆ 6:1).

"ಭದ್ರವಾದ ಕ್ರೈಸ್ತ ಮನೆಯ ಅಭಿವೃದ್ಧಿಯಲ್ಲಿ ಸದಸ್ಯರಿಗೆ ನೆರವಾಗಬಹುದಾದ ಸಂಪನ್ಮೂಲಗಳನ್ನು ಸಭೆ ಮತ್ತು ಸಭಾ ಸಂಸ್ಥೆಯ ಮೂಲಕ ಸಿಗಲಿದೆ. ಈ ಸಂಪನ್ಮೂಲಗಳು ಸೇರಿವೆ: (1) ಮದುವೆಯಾಗಲು ನಿಶ್ಚಿತಾರ್ಥವಾದ ದಂಪತಿಗಳಿಗೆ ನವಜ್ಞಾನ ತರಬೇತಿ ಕಾರ್ಯಕ್ರಮ, (2) ತಮ್ಮ ಕುಟುಂಬದೊಂದಿಗೆ ವಿವಾಹಿತ ದಂಪತಿಗಳಿಗೆ ತಿಳಿಹೇಳುವ ಕಾರ್ಯಕ್ರಮಗಳು ಮತ್ತು (3) ಮುರಿದ ಕುಟುಂಬಗಳಿಗೆ ಮತ್ತು ವಿಚ್ಛೇದಿತ ವ್ಯಕ್ತಿಗಳಿಗೆ ಬೆಂಬಲ ನೀಡುವ ಕಾರ್ಯಕ್ರಮಗಳು"

– ದಿ ಸೆವೆಂತ್ ಡೇ ಅಡ್ವೆಂಟಿಸ್ಟ್ ಚರ್ಚ್ ಮ್ಯಾನ್ಯುಯಲ್ 19ನೇ ಆವೃತಿ (ನಮ್‌ಪ, ಇಡಹೋ : ಫೆಸಿಫಿಕ್ ಪ್ರೆಸ್ ಪಬ್ಲಿಸಿಂಗ್ ಅಸೋಸಿಯೇಷನ್ 2016) ಪುಟ 161.

**ವಿಚ್ಛೇದನ ಮೂಲಕ ಹಾದುಹೋಗುವ ಯಾರೋ ಒಬ್ಬನಿಗೆ ನೀವು ಪ್ರಾಯೋಗಿಕವಾಗಿ ಮತ್ತು ನಿರ್ಣಾಯಕವಲ್ಲದ ಯಾವ ಸಹಾಯವನ್ನು ಮಾಡಬಹುದು?**

**ಬುಧವಾರ** **ಏಪ್ರಿಲ್ 24**

## ಮರಣ ಮತ್ತು ಒಂಟಿತನ

ಕೆಲವರು ಒಮ್ಮೆ ಪ್ರಶ್ನೆಯನ್ನು ಕೇಳಿದರು. ಸಾವಿನ ಪ್ರಶ್ನೆಗೆ ಸಂಬಂಧಿಸಿದಂತೆ ಮಾನವ ಮತ್ತು ಕೋಳಿಗಳ ನಡುವಿನ ವ್ಯತ್ಯಾಸವೇನು? ಇದಕ್ಕೆ ಉತ್ತರವೆಂದರೆ ಕೋಳಿಗಳು ಸಾಯುತ್ತವೆ, ಮನುಷ್ಯನು ಸಾಯುವುದು ಸಂಭವನೀಯ ಕೂಡಾ ನಾವು ಸಾಯುತ್ತೇವೆ ಎಂದು ಗೊತ್ತು, ಕೋಳಿಗಳಿಗೆ ಗೊತ್ತಿಲ್ಲ. ಮತ್ತು ಸನಿಹವಾದ ಸಾವಿನ ಕುರಿತ ಈ ಜ್ಞಾನವು ಈಗ ನಾವು ಹೇಗೆ ಜೀವಿಸುತ್ತೇವೆ ಎಂಬುದರ ಮೇಲೆ ಮಹಾಪರಿಣಾಮ ಬೀರುತ್ತದೆ.

ನಾವು ತಿಳಿದಿರುವಂತೆ ಮದುವೆಯೂ ಸೇರಿದಂತೆ ಎಲ್ಲ ಸಂಬಂಧಗಳನ್ನು ಶೀಘ್ರವಾಗಿ ಅಥವಾ ನಂತರ ನಮ್ಮ ಮಹಾನ್ ಶತ್ರುವಾದ ಸಾವಿನಲ್ಲಿ ಅಂತ್ಯಗೊಳ್ಳುತ್ತದೆ. ಎಷ್ಟೇ ಹತ್ತಿರವಾದ ಐಕ್ಯಮತವಾದರೂ ಮಹಾನ್ ಪ್ರೀತಿಯಾದರೂ ಆಳವಾದ ಒಡನಾಟವಾದರೂ ಒಟ್ಟಾಗಿ ಸಮಯ ಕಳೆದದ್ದು ಮಾನವರಾಗಿ ನಾವು (ಕೋಳಿಗಳಂತೆ) ಬೇಗನೆ ಅಥವಾ ನಂತರ ಸಾಯುತ್ತೇವೆ ಎಂದು ತಿಳಿದಿದ್ದೇವೆ (ಯೇಸು ಮುಂಚಿತವಾಗಿ ಹಿಂತಿರುಗಿದರೆ) ಮತ್ತು ಅದು ಆದಾಗ ನಮ್ಮ ಎಲ್ಲಾ ಸಂಬಂಧಗಳನ್ನು ಸ್ಥಗಿತಗೊಳ್ಳುತ್ತವೆ. ಮೊದಲ ಪಾಪದಿಂದ ಯೇಸು ಹಿಂದಿರುಗುವ ತನಕ ಇದು ನಮ್ಮ ವಿಧಿಯಾಗಿರುತ್ತದೆ.

ಆದಾಮ ಮತ್ತು ಹವ್ವಳ ಈ ಇಬ್ಬರಲ್ಲಿ ಯಾರು ಮೊದಲು ಸತ್ತರೆಂದು ಸತ್ಯವೇದ ಹೇಳುವುದಿಲ್ಲ. ಆದರೆ ಅದು ಇನ್ನೊಬ್ಬರಿಗೆ ನಿರ್ದಿಷ್ಟವಾಗಿ ನೋವುಂಟು

ಮಾಡಿರಬೇಕು. ವಿಶೇಷವಾಗಿ ಮರಣವು ಪ್ರಾರಂಭವಾಗಲು ಎಂದಿಗೂ ಜೀವನದ ಒಂದು ಭಾಗವಾಗಿರಬೇಕಿಲ್ಲ. ನಾವು ಹಿಂದಿನ ಪಾಠದಲ್ಲಿ ನೋಡಿದಂತೆ ಒಂದೇ ಹಳೆಯ ಸಾವು ಅವರನ್ನು ದುಃಖಿಸುವಂತೆ ಮಾಡಿತು. ಅವರು ಸಂಗಾತಿಯ ಸಾವಿನೊಂದಿಗೆ ಯಾವ ರೀತಿ ಹಾದು ಹೋದರೆಂದು ಯಾರು ತಾನೇ ಊಹಿಸಬಹುದು?

ಸಮಸ್ಯೆ ಏನೆಂದರೆ ನಾವು ಸಾವಿಗೆ ಹೊಂದಿಕೊಂಡಿದ್ದೇವೆ. ನಾವು ಅದನ್ನು ಲಘುವಾಗಿ ತೆಗೆದುಕೊಳ್ಳುತ್ತೇವೆ. ಆದರೆ ಮನುಷ್ಯರಾಗಿ ನಾವು ಅನುಭವಿಸಿದ್ದ ಅದನ್ನು ಏನಾದರೊಂದು ಎಂದು ಎಂದಿಗೂ ಊಹಿಸಬಾರದು. ಆದ್ದರಿಂದ ಇಂದಿಗೂ ಸಹ ಆಗಾಗ್ಗೆ ನಮಗೆ ಸಾಧ್ಯವಾಗದಿದ್ದಾಗ ನಾವು ಅದನ್ನು ಅರ್ಥ ಮಾಡಿಕೊಳ್ಳಲು ಪ್ರಯಾಸಪಡುತ್ತೇವೆ.

**ಈ ಕೆಳಗಿನ ಪಠ್ಯಗಳು ಸಾವಿನ ಬಗ್ಗೆ ಮತ್ತು ಜನರು ಅದರೊಂದಿಗೆ ಹೇಗೆ ಹೋರಾಟ ಮಾಡುತ್ತಿದ್ದಾರೆ ಎಂದು ನಮಗೆ ಕಲಿಸುತ್ತದೆ?** ಯೆಶಾಯ 57:1; ಪ್ರಕಟನೆ 21:4; 1 ಥೆಸಲೋನಿಕದವರಿಗೆ 4:17,18; ಮತ್ತಾಯ 5:4; 2 ಸಮುವೇಲ 18:33; ಆದಿಕಾಂಡ 37:34.

ಯಾವುದೇ ಪ್ರಶ್ನೆ ಇಲ್ಲ: ನಾವೆಲ್ಲರೂ ನಮ್ಮ ಸುತ್ತ ಸ್ವಂತ ಸಾವಿನ ವಾಸ್ತವತೆಯನ್ನು ಎದುರಿಸುವುದಿಲ್ಲ. ನಾವು ಇತರರ ಪ್ರೀತಿಪಾತ್ರರ ನಮ್ಮ ಹತ್ತಿರದ ಒಡನಾಡಿಗಳ ಸಾವಿನ ವಾಸ್ತವತೆಯನ್ನು ಎದುರಿಸಬಹುದು. ಆದ್ದರಿಂದ ಬೇಗ ಅಥವಾ ನಂತರ ಬೇರೊಬ್ಬರ ಸಾವಿಗೆ ಕಾರಣವಾದ ಸಮಯ, ಕಾಲ, ಒಂಟಿತನವನ್ನು ನಾವು ಅನೇಕರು ಎದುರಿಸುತ್ತೇವೆ. ಅದು ಕಷ್ಟ, ಅದು ನೋವುಂಟು ಮಾಡುತ್ತದೆ ಮತ್ತು ಅಂತಹ ಸಮಯದಲ್ಲಿ ನಾವು ಹೆಚ್ಚಾಗಿ ದೇವರ ಭರವಸೆಗಳನ್ನು ಮಾತ್ರ ಪಡೆಯಬೇಕು. ಎಲ್ಲದರ ನಂತರ ಪಾಪದ ಜಗತ್ತಿನಲ್ಲಿ ನೋವು ಮತ್ತು ಮರಣ ಮತ್ತೆ ಇನ್ನೇನು ನಾವು ಹೊಂದಿದ್ದೆವೆ?

**ಪ್ರೀತಿಪಾತ್ರರ ಮರಣದಿಂದ ಏಕಾಂಗಿತನವನ್ನು ಅನುಭವಿಸುತ್ತಿರುವ ನಿಮಗೆ ತಿಳಿದಿರುವ ಇತರರಿಗೆ ನಿಮ್ಮ ಸಭೆಯು ಹೇಗೆ ಸಹಾಯ ಮಾಡಬಹುದು?**

**ಗುರುವಾರ** **ಏಪ್ರಿಲ್ 25**

## ಆಧ್ಯಾತ್ಮಿಕವಾಗಿ ಒಂಟಿ

ನತಾಲಿಯಾ ಎಂಬ ಯುವತಿಯೊಬ್ಬಳು ಮದುವೆಯಾಗಿ ಏಳು ವರ್ಷಗಳಾಗಿದ್ದಾಗ ಒಬ್ಬ ಸ್ನೇಹಿತನ ಆಮಂತ್ರಣದಲ್ಲಿ ಅವರು ಸ್ಥಳೀಯ ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯಲ್ಲಿ ಸುವಾರ್ತಾ ಕೂಟದ ಸರಣಿಯಲ್ಲಿ ಪಾಲ್ಗೊಂಡರು. ಅವಳು ಏನೋ ಕಲಿತಳೋ ಅದರಿಂದ ತಪ್ಪಿತಸ್ಥಳೆಂದು ನಿರ್ಣಯಿಸಿ ಅವಳ ಹೃದಯವನ್ನು ಕ್ರಿಸ್ತನಿಗೆ ಒಪ್ಪಿಸಿಕೊಟ್ಟಳು. ಹೊಸದಾಗಿ ಹುಟ್ಟಿದ ಅನುಭವ ಹೊಂದಿದ್ದಳು ಮತ್ತು ಆಕೆಯ ಪತಿ, ತಂದೆ–ತಾಯಿ, ಅತ್ತೆ–ಮಾವ ಆಕೆಯ ಮುಂದಿನ ಬಾಗಿಲಿನ ನೆರೆಮನೆಯವರ ತೀವ್ರ ಆಕ್ಷೇಪಣೆಗಳ ಹೊರತಾಗಿಯೂ ನತಾಲಿಯಾ ಸೆವೆಂತ್–ಡೇ ಅಡ್ವೆಂಟಿಸ್ಟ್ ಸಭೆಗೆ ಸೇರಿಕೊಂಡಳು. ಆಕೆಯು ಸಹ ತನ್ನ ಜೀವನಶೈಲಿಯನ್ನು ತಾನು ಕಂಡುಕೊಂಡ ಹೊಸ ನಂಬಿಕೆಗೆ ಸ್ವಲ್ಪ ಮಟ್ಟಿಗೆ ಸರಿಪಡಿಸಿಕೊಂಡಳು.

ಒಬ್ಬರು ಊಹಿಸಿದಂತೆ ಅವಳು ಹಿಂದೆ ತಳ್ಳುವ ಹೆಚ್ಚಿನ ಸಮಸ್ಯೆಯನ್ನು ಎದುರಿಸಿದಳು. ಯಾವುದು ವಿಶೇಷವಾಗಿ ಕಷ್ಟಕರವಾಗಿ ಮಾಡಿತೆಂದರೆ ಆಕೆಯ ಗಂಡ ತನ್ನ ದೃಷ್ಟಿಕೋನದಿಂದ ವಾದಿಸುತ್ತಿದ್ದ : "ನಾವು ಮದುವೆಯಾದಾಗ ಈ ಲಕ್ಷಣಕ್ಕೋಸ್ಕರವಾಗಿ ಆಗಿಲ್ಲ. ನೀನು ಸಂಪೂರ್ಣವಾಗಿ ಹೊಸ ವ್ಯಕ್ತಿಯಾಗಿದ್ದೀಯಾ ಮತ್ತು ನನಗೆ ಹಳೆಯವಳನ್ನು ಬಯಸುತ್ತೇನೆ".

ವರ್ಷಗಳ ಕಾಲ ಆಕೆಯು ನಂಬಿಕೆಯ ಜೀವನವನ್ನು ನಡೆಸಲು ಹೆಣಗಾಡುತ್ತಿದ್ದಾಳೆ. ಮದುವೆ ಆಗಿದ್ದಾಗ್ಯೂ ಆಕೆ "ಆಧ್ಯಾತ್ಮಿಕವಾಗಿ ಒಂಟಿ" ಎಂದು ನಾವು ಕರೆಯಬಹುದು.

**ಆಧ್ಯಾತ್ಮಿಕವಾಗಿ ಒಂಟಿಯೆಂದು ಭಾವಿಸುವವರಿಗೆ ಈ ಕೆಳಗಿನ ವಾಕ್ಯಗಳಲ್ಲಿ ಯಾವ ಪ್ರೋತ್ಸಾಹದಾಯಕ ಮಾತುಗಳು ಕಂಡುಬರುತ್ತವೆ? ಯೆಶಾಯ 54:5; ಹೋಶೇಯ 2:19, 20; ಕೀರ್ತನೆಗಳು 72:12.**

ಪ್ರಪಂಚದಾದ್ಯಂತ ನಮ್ಮ ಸಭೆಯಲ್ಲಿ "ನತಾಲಿಯರು" ಇದ್ದಾರೆ. ಈ ಜನರು ಪುರುಷರು ಮತ್ತು ಮಹಿಳೆಯರು ಮದುವೆಯಾದವರು ಆದರೆ ಸಭೆಗೆ ಮಾತ್ರ

ಒಂಟಿಯಾಗಿ ಅಥವಾ ಅವರ ಮಕ್ಕಳೊಂದಿಗೆ ಮಾತ್ರ ಹೋಗುತ್ತಾರೆ. ಅವರು ವಿಭಿನ್ನ ನಂಬಿಕೆಯುಳ್ಳ ವ್ಯಕ್ತಿಯನ್ನು ಮದುವೆಯಾಗಿರಬಹುದು ಅಥವಾ ಬಹುಶಃ ಅವರು ಸಭೆಗೆ ಸೇರಿಕೊಂಡಾಗ ಅವರ ಸಂಗಾತಿ ಬರುವುದಿಲ್ಲ ಅಥವಾ ಮದುವೆಯಾದಾಗ ಇಬ್ಬರು ಸಭೆಯ ಸದಸ್ಯರುಗಳು – ಆದರೆ ಒಬ್ಬರು ಯಾವುದೋ ಕಾರಣಕ್ಕೋಸ್ಕರ ಕೈಬಿಟ್ಟರು, ಬರುವುದನ್ನು ನಿಲ್ಲಿಸಿದರು ಮತ್ತು ನಂಬಿಕೆಗೆ ವಿರುದ್ಧವಾಗಿಯೂ ಇರಬಹುದು. ಈ ಪುರುಷರು ಮತ್ತು ಮಹಿಳೆಯರು ಸಭೆಗೆ ಒಂಟಿಯಾಗಿ ಬರುತ್ತಾರೆ ಮತ್ತು ಸಭೆಯ ಆರಾಧನೆ ಸೇವಾಕಾರ್ಯದ ನಂತರ ಊಟಕ್ಕೆ ಅಥವಾ ವಾಯುವಿಹಾರಕ್ಕೆ ಅಥವಾ ಸಾಮಾಜಿಕ ಚಟುವಟಿಕೆಗಳಿಗೆ ಒಂಟಿಯಾಗಿ ಮಾತ್ರ ಹೋಗುತ್ತಾರೆ. ಸಭೆಯ ಸೇವೆಗೆ ಅವರಿಗೆ ಒಪ್ಪಿದಷ್ಟು ಆರ್ಥಿಕ ನೆರವು ನೀಡಲಾಗದ ಕಾರಣ ದುಃಖಿತರಾಗುತ್ತಾರೆ. ಯಾಕೆಂದರೆ ಅವರ ಸಂಗಾತಿಯು ಹಾಗೆ ಮಾಡಲು ಒಪ್ಪಿಕೊಳ್ಳುವುದಿಲ್ಲ. ಮದುವೆ ಆಗಿದ್ದಾಗ್ಯೂ ಅವರು ಆಧ್ಯಾತ್ಮಿಕವಾಗಿ ಒಬ್ಬ ವಿಧವೆ ಅಥವಾ ವಿದುರನಾಗಿ ಭಾವಿಸಬಹುದು.

ನಾವೆಲ್ಲಾ ಬಹುಶಃ ಕೆಲವು ಸಮಯದಲ್ಲಿ ಅಥವಾ ಇನ್ನೊಂದಡೆ ಈ ರೀತಿಯ ಜನರನ್ನು ಸಭೆಯಲ್ಲಿ ಭೇಟಿ ಮಾಡಿದ್ದೇವೆ ಮತ್ತು ಅವರಿಗೆ ನಮ್ಮ ಪ್ರೀತಿ ಮತ್ತು ಪ್ರೋತ್ಸಾಹದ ಅಗತ್ಯವಿದೆ.

**ನಮ್ಮ ಮಧ್ಯದಲ್ಲಿ ಆಧ್ಯಾತ್ಮಿಕವಾಗಿ ಒಂಟಿಯಾಗಿರುವವರಿಗೆ ಸಹಾಯ ಮಾಡಲು ಒಂದು ಸಭೆಯು ಕುಟುಂಬವಾಗಿ ನಾವು ಯಾವ ಪ್ರಾಯೋಗಿಕ ವಿಷಯಗಳನ್ನು ಮಾಡಬಹುದು?**

**ಶುಕ್ರವಾರ** **ಏಪ್ರಿಲ್ 26**

**ಮುಂದಿನ ಆಲೋಚನೆ :** "ಸಕ್ರಿಯ ದುಡಿಮೆಯ ಜೀವನದ ಮಧ್ಯದಲ್ಲಿ ಹನೋಕನು ದೇವರೊಂದಿಗಿನ ಆತನ ಒಡನಾಟಕ್ಕೆ ಬೆಂಬಲಕೊಟ್ಟರು. ಹೆಚ್ಚು ಹೆಚ್ಚಾದ ತನ್ನ ದುಡಿಮೆ ಒತ್ತಡದಲ್ಲಿಯೂ ಆತನ ಪ್ರಾರ್ಥನೆಗಳು ಹೆಚ್ಚು ಸ್ಥಿರವಾಗಿ ಮತ್ತು ಶ್ರದ್ಧೆಯಿಂದ ಕೂಡಿದ್ದವು. ಅವರು ಸ್ವತಃ ತಮ್ಮನ್ನು ಎಲ್ಲಾ ಸಮಾಜದಿಂದ ನಿಯಮಿತ ವೇಳೆಯಲ್ಲಿ ಸೇರದಿರಲು ಮುಂದುವರಿಸಿದರು. ಜನರ ನಡುವೆ ಸ್ವಲ್ಪ ಸಮಯ ಉಳಿದ ನಂತರ ಶಿಕ್ಷಣ ಮತ್ತು ಉದಾಹರಣೆಯ ಮೂಲಕ

ಅವರ ಪ್ರಯೋಜನಕ್ಕಾಗಿ ದುಡಿಯುತ್ತಿದ್ದ ಅವರು ಏಕಾಂತದಲ್ಲಿ ಕಾಲ ಕಳೆಯುವುದಕ್ಕೆ ಹಿಂಜರಿದರು. ದೇವರು ಮಾತ್ರ ಕೊಡಬಹುದಾದ ಆ ದೈವೀಕ ಜ್ಞಾನಕ್ಕೋಸ್ಕರ ಹಸಿವೆಯಿಂದಿದ್ದರು ಮತ್ತು ಬಾಯಾರಿಕೆಯಿಂದಿದ್ದರು. ದೇವರೊಂದಿಗಿನ ಈ ಒಡನಾಟಗಳಿಂದ ಹನೋಕನು ದೈವೀಕ ಸ್ವರೂಪವನ್ನು ಪ್ರತಿಬಿಂಬಿಸಲು ಹೆಚ್ಚು ಹೆಚ್ಚು ಬಂದನು. ಆತನ ಮುಖವು ಪವಿತ್ರ ಬೆಳಕಿನೊಂದಿಗೆ ಪ್ರಕಾಶಮಾನವಾಗಿತ್ತು. ಯೇಸುವಿನ ಮುಖದಲ್ಲಿ ಹೊಳೆಯುವ ಬೆಳಕಿನಂತಿತ್ತು. ಅವರು ಈ ದೈವೀಕ ಒಡನಾಟಗಳಿಂದ ಹೊರಬಂದಂತೆ ಅವನ ಮುಖದ ಮೇಲಿನ ಪರಲೋಕದ ಪ್ರಭಾವವನ್ನು ನೋಡಿ ಭಕ್ತಿಹೀನರು ಸಹ ಭಯಭೀತರಾದರು– ಎಲೆನ್ ಜಿ ವೈಟ್, ಗಾಸ್ಪೆಲ್ ವರ್ಕರ್ಸ್, ಪುಟ 52. ಇಲ್ಲಿ ಹನೋಕನ ಕಥೆಯು ಪ್ರೋತ್ಸಾಹದಾಯಕವಾಗಿದ್ದರೂ ಏಕಾಂತತೆಯ ಸಮಯವನ್ನು ಆಯ್ಕೆ ಮಾಡುವವರ ಬಗ್ಗೆ ಏನೂ ಶಕ್ತಿಯುತವಾದದನ್ನು ಹೇಳುವದಿದ್ದರೂ ಅನೇಕರು ಕೇಳಿಕೊಳ್ಳದಿರುವ ಏಕಾಂತತೆಯುನ್ನು ಎದುರಿಸುತ್ತಿದ್ದಾರೆ. ಅವರು ಒಂಟಿಯಾಗಿರಬೇಕೆಂದು ಬಯಸುವುದಿಲ್ಲ. ಹೌದು ಮತ್ತು ನಾವು ಯಾವಾಗಲೂ ಇರುವಾತನಾದ ಕರ್ತನೊಂದಿಗೆ ಆನಂದಪೂರ್ಣ ಒಡನಾಟ ಹೊಂದಬಹುದು. ಆದರೆ ಕೆಲವೊಮ್ಮೆ ನಾವು ಮಾನವ ಒಡನಾಟವನ್ನು ಮತ್ತು ಅನ್ಯೋನ್ಯತೆಯನ್ನು ಹಂಬಲಿಸುತ್ತೇವೆ. ಒಂದು ಸಭೆಯಾಗಿ ನಾವು ಸಬ್ಬತ್ ದಿನದಲ್ಲಿ ನಮ್ಮ ಪಕ್ಕದಲ್ಲಿ ಕುಳಿತುಕೊಳ್ಳುವವರಿಗೆ ತಲುಪಲು ಸಿದ್ಧರಾಗಿರಬೇಕೆಂಬುದು ಎಷ್ಟು ಮಹತ್ವದ್ದಾಗಿದೆ. ಆದರೂ ಅವರು ಒಂಟಿತನದ ಭಯಾನಕ ಋತುವಿನ ಮೂಲಕ ಹಾದುಹೋಗುತ್ತಿದ್ದಾರೆ. ಅದೇ ಸಮಯದಲ್ಲಿ ನೀವು ಅಂತಹ ಸಮಯದಲ್ಲಿ ಹಾದುಹೋಗುತ್ತಿದ್ದರೆ. ಸಭೆಯಲ್ಲಿ (ಅಥವಾ ಬೇರೆ ಎಲ್ಲೋ) ನೀವು ನಂಬಿಕೆ ಇಡಬಹುದೆಂದು ಭಾವಿಸುವವರನ್ನು ಹುಡುಕಿಕೊಂಡು ಅವರಿಗೆ ತಿಳಿಸಿರಿ. ಜನರು ಯಾರೋ ಒಬ್ಬನನ್ನು ನೋಡುವ ಮೂಲಕ ಸಾಧಾರಣವಾಗಿ ಅವರು ಏನು ಮಾಡುತ್ತಿದ್ದರೆಂದು ಹೇಳುವುದಕ್ಕೆ ಆಗುವುದಿಲ್ಲ. ಕನಿಷ್ಟ ಪಕ್ಷ ಮುಖವಾಡ ಹಿಂದೆ ಅಡಗಿಕೊಳ್ಳಲು ಕೆಲವು ಜನರಿಗೆ ಸುಲಭವಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಿಮ್ಮ ಮಧ್ಯದಲ್ಲಿರುವ ಏಕಾಂಗಿಯ ಅಗತ್ಯಗಳಿಗೆ ನಿಮ್ಮ ಸಭೆ ಹೇಗೆ ಹೆಚ್ಚು ಸೂಕ್ಷ್ಮವಾಗಿರಬಹುದೆಂದು ಕಲಿಯಬಹುದು.

2. ಕೊರತೆಯಲ್ಲಿದ್ದೇನೆಂದು ಸೂಚಿಸುವುದಕ್ಕೆ ನಾನು ಇದನ್ನು ಹೇಳುವುದಿಲ್ಲ; ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವುದನ್ನು ಕಲಿತುಕೊಂಡಿದ್ದೇನೆ" (ಫಿಲಿಪ್ಪಿಯವರಿಗೆ 4:11). ಇಲ್ಲಿ ಪೌಲನ ಮಾತುಗಳನ್ನು ವಿಶಾಲವಾದ ಸನ್ನಿವೇಶವನ್ನು ಓದಿರಿ. ನಮಗೆ ನಾವೇ ಇವುಗಳನ್ನು ಸಮೀಪದಲ್ಲಿ ಇಡುವುದಕ್ಕೆ ನಾವು ಹೇಗೆ ಕಲಿಯಬಹುದು. ಅದೇ ಸಮಯದಲ್ಲಿ ನಿಜವಾಗಿ ನೋವು ಮಾಡುವ ಯಾರಿಗಾದರೂ ನಾವು ಈ ವಾಕ್ಯ ವೃಂದವನ್ನು ಉಲ್ಲೇಖಿಸುವುದರಲ್ಲಿ ನಾವು ಏಕೆ ಬಹಳ ಎಚ್ಚರಿಕೆಯಿಂದ ಇರಬೇಕು?

3. ತರಗತಿಯಲ್ಲಿ ನೀವು ತೀವ್ರ ಏಕಾಂಗಿತನದ ಮೂಲಕ ಹಾದು ಹೋಗುವ ಸಮಯದ ಬಗ್ಗೆ ಮಾತನಾಡಿ. ನಿಮಗೆ ಯಾವುದು ಸಹಾಯ ಮಾಡಿದೆ? ನಿಮಗೆ ಏನು ನೋವು ಮಾಡಿತು? ಇತರರಿಗೆ ಸಹಾಯ ಆಗಬಹುದೆಂಬುದನ್ನು ನೀವು ಏನು ಕಲಿತಿದ್ದೀರಿ?